# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 05–01–2013** **ಸಮಯ : $2^1/_2$ ಘಂಟೆ**

**ತರಗತಿ : X** **ಅಂಕ : 100**

**ಸೂಚನೆ :** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್*** ನಂಬರ್ ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

---

**I. ಆವರಣದಿಂದ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ: 10x1=10**

1. _________ ಎಂದರೆ ವ್ಯಕ್ತಿ ಆರೋಗ್ಯಕರ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದು.
   (ಸಂವೇದನಾ ಶೀಲತೆ; ಸ್ವಪರಿಜ್ಞಾನ; ಸೋದರತೆ)
2. ಪ್ರತಿ ಮಾನವ ಜೀವಿಗೆ ಘನತೆಯಿಂದ ಜೀವಿಸಲು _____ ಅಗತ್ಯ.
   (ಮಾನವ ಹಕ್ಕುಗಳು; ವ್ಯಕ್ತಿ ಗೌರವ; ಸಂಪ್ರದಾಯ ಸಂಸ್ಕೃತಿ)
3. ___________ ದಲ್ಲಿ ಹುಟ್ಟಿದ ಜನರು ಸುಲಭವಾಗಿ ಮರೆತು ಹೋಗುವುದಿಲ್ಲ.
   (ಆಧ್ಯಾತ್ಮಿಕ ಜನನ; ಪ್ರೇರಿತ ಜನನ; ಜೈವಿಕ ಜನನ)
4. _________ ಗೆಳೆತನಕ್ಕೆ ಶೋಭೆಯನ್ನು ತರುತ್ತದೆ.
   (ಪ್ರೀತಿ; ನಿಷ್ಠೆ; ದೀನತೆ)
5. ಸರಿ ಮತ್ತು ತಪ್ಪುಗಳನ್ನು ಕಂಡುಕೊಳ್ಳುವ ನಿಪುಣತೆಯೇ _______
   (ಭೌತಿಕ ಧೈರ್ಯ; ಮಾನವೀಯತೆ; ನೈತಿಕ ಬಲ)
6. ಆಧ್ಯಾತ್ಮಿಕತೆಗೆ _______ ಪೀಠಿಕೆಯಾಗಿರುತ್ತದೆ.
   (ದೀನತೆ; ಸಂವೇದನಾ ಶೀಲತೆ; ಘನತೆ)
7. ವಾಸ್ತವ ಪರಿಸರದೊಂದಿಗೆ ಸಂಬಂಧವನ್ನಿಟ್ಟುಕೊಳ್ಳಲು ________ ಬೇಕೇ ಬೇಕು.
   (ನಂಬಿಕೆ; ಸಾಮಾಜಿಕ ಪರಿಜ್ಞಾನ; ಮುಖಂಡತ್ವ)
8. _________ ಜೀವನಕ್ಕೆ ಹೊಸತನವನ್ನು ತರುತ್ತದೆ.
   (ಘನತೆ; ವೈವಿಧ್ಯತೆ; ಏಕತೆ)
9. ಬೆರಳುಗಳೈದು _______ ಒಂದೇ.
   (ಮುಖಂಡ; ಕಾಯಕ; ದೃಷ್ಟಿ)
10. _________ ಯಲ್ಲಿ ಬೆಳೆಯಲು ನಾವು ಮುಕ್ತ ಮನಸ್ಸುಳ್ಳವರಾಗಿದ್ದು ಅಕ್ಕ ಪಕ್ಕದ ಪರಿಸರಕ್ಕೆ ಸ್ಪಂದಿಸುವವರಾಗಿರಬೇಕು.
    (ವೈವಿಧ್ಯತೆ; ಸಂವೇದನಾಶೀಲತೆ; ದೀನತೆ)



**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ: 10x1=10**

1. _________ ಪ್ರವೃತ್ತಿಯ ಗೆಳೆಯ ನಿಸ್ತೇಜರಾಗಿರುವಾಗ ನಮ್ಮ ಸಮಸ್ಯೆ ಗೊಂದಲಗಳನ್ನು ಮರೆಸುತ್ತಾನೆ.
2. ಒಂದು _________ ಕ್ಕೆ ಬೆಲೆ ಕಟ್ಟಲು, ಹತ್ತಬೇಕಾದ ಬಸ್ಸು ತಪ್ಪಿಹೋದ ಪ್ರಯಾಣಿಕನನ್ನು ಕೇಳಿ.
3. _________ ಮತ್ತು ಸಂತೋಷ ಆರೋಗ್ಯಕರ ಜೀವನದ ಕೀಲಿಯಾಗಿದೆ.
4. ಹೆದರಿಕೆ _________ ವಾದುದು ಮತ್ತು ಅದರಿಂದ ಯಾರು ಹೊರತಲ್ಲ.
5. ________ ಅಪರೂಪ ಸಂಪನ್ಮೂಲ ಎನ್ನುತ್ತಾರೆ ಪೀಟರ್ ಡ್ರೂಕರ್.
6. ಓದಲು ಸಮಯವಿರಲಿ. ಅದು _________ ಬುಗ್ಗೆ.
7. _________ ರವರು 'ಜೀವಂತ ಸಂತ'ರೆಂದು ಪ್ರಖ್ಯಾತರಾಗಿದ್ದರು.
8. ಬಹುರೂಪಿ ಸಮಾಜದಲ್ಲಿ ವಿವಿಧ ಗುಂಪುಗಳು ಸೌಹಾರ್ದದಿಂದ ಜೀವಿಸುವುದಾದರೆ ಅದು _______ ಯನ್ನು ಪೋಷಿಸುತ್ತದೆ.
9. ಮಾನವ ಸ್ವಭಾವದ ಸಂಪೂರ್ಣತೆ ಮಾನವ _________ ಕಾರ್ಯ ರೂಪಕ್ಕೆ ತರುವಲ್ಲಿ ಅಡಕವಾಗಿದೆ.
10. _________ ಗಳು ಒಂದೇ ನಾಣ್ಯದ ಎರಡು ಮುಖಗಳು.

**III. ಹೊಂದಿಸಿ ಬರೆಯಿರಿ: 5x1=5**

| | | | |
|---|---|---|---|
| 1. | ಮುಖಂಡ | – | ಹಣ |
| 2. | ರವೀಂದ್ರನಾಥ ಠಾಗೂರ್ | – | ಪರಭಾರೆ ಮಾಡುವಂತಿಲ್ಲ |
| 3. | ಸಮಯ | – | ಕಾಬೂಲಿವಾಲ |
| 4. | ಪ್ರಾರ್ಥಿಸುವ ಮೊದಲು | – | ಮಾನವೀಯತೆ |
| 5. | ಮಾನವ ಹಕ್ಕುಗಳು | – | ಕ್ಷಮಿಸು. |

**IV. ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ಗೆಳೆಯನೆಂದರೆ ಯಾರು?
2. ಮುಖಂಡನ ಮೂಲಗಳು ಯಾವುವು?
3. ನಾಲ್ಕು ವಿಧದ ಜನನಗಳನ್ನು ನಿನ್ನ ಸ್ವಂತ ಮಾತಿನಲ್ಲಿ ವಿವರಿಸು.
4. ಸಮಯ ಎಂದರೇನು?
5. ಮಾನವ ಘನತೆ ಎಂದರೇನು?

**V. ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಐದು ವಾಕ್ಯಗಳಲ್ಲಿ ಉತ್ತರಿಸಿರಿ: 4x5=20**

1. ಜನರು ಸ್ವಾಭಿಮಾನ ಕಳೆದುಕೊಳ್ಳುವ ಸಂದರ್ಭ ಮತ್ತು ಕಾರಣಗಳನ್ನು ವಿವರಿಸು.
2. ದೀನತೆ ಒಂದು ಸುಗುಣ ಎಂಬುದಕ್ಕೆ ಕಾರಣಗಳನ್ನು ಕೊಡು.

3. ಮದರ್ ತೆರೆಜಾರವರ ಸಮಾಜ ಸೇವೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸು.

4. ನೀನು ನಿನ್ನ ಗೆಳೆತನ ಉಳಿಸಬೇಕಾದರೆ ಪಾಲಿಸಬೇಕಾದ ಅಂಶಗಳಾವುವು?

5. ಆಫ್ರಿಕಾದ ಬಾಲಕನ ಸಾಮತಿಯಿಂದ ನೀನು ಯಾವ ಅಂಶಗಳನ್ನು ತಿಳಿದುಕೊಂಡೆ?

**VI. ಕೆಳಗಿನ ನಾಲ್ಕು ಪ್ರಶ್ನೆಗಳನ್ನು ಏಳು ವಾಕ್ಯಗಳಲ್ಲಿ ಉತ್ತರಿಸಿರಿ: 4x7=28**

1. ಸಮಯವನ್ನು ಉಪಯುಕ್ತವಾಗಿ ಹೇಗೆ ಬಳಸಬಹುದು?
2. ಸಾಮಾಜಿಕ ಪರಿಜ್ಞಾನದ ತೋರಿಕೆಗಳನ್ನು ಪಟ್ಟಿ ಮಾಡು.
3. ಸಂವೇದನಾ ಶೀಲತೆಯ ಹಂತಗಳು ಯಾವುವು? ವಿವರಿಸು.
4. ಮಾನವ ಹಕ್ಕುಗಳ ಗುಣಲಕ್ಷಣಗಳನ್ನು ವಿವರಿಸು.
5. ಮುಖಂಡನಿಂದ ಅಪೇಕ್ಷಿತ 6 ಗುಣಗಳು ಯಾವುವು?
6. ನಿನ್ನ ಜೀವನದಲ್ಲಿ ಪ್ರಭಾವ ಬೀರಿದ ಮಹಾ ವ್ಯಕ್ತಿಗಳು ಯಾರು? ಅವರ ಜೀವನ ಚರಿತ್ರೆಯಿಂದ ನೀನು ಏನು ಕಲಿತುಕೊಳ್ಳುತ್ತಿ?

**VII. ಕೆಳಗಿನ ಯಾವುದಾದರೂ ಒಂದು ವಿಷಯದ ಮೇಲೆ ನಿಮ್ಮ ಅನಿಸಿಕೆ ಬರೆಯಿರಿ: 5x1=5**

1. ವೈವಿಧ್ಯತೆಯಲ್ಲಿ ಏಕತೆಯು ಜನರಲ್ಲಿ ಉತ್ತಮ ಸಂಬಂಧವನ್ನು ಬೆಳೆಸುತ್ತದೆ.
2. ಸಮಯ ಅಪರೂಪ ಸಂಪನ್ಮೂಲ.
3. ಗೆಳೆಯರು ಕನ್ನಡಿಯಂತೆ.

**VIII. ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳಿಗೆ ಪರಿಹಾರ ನೀಡಿರಿ: 2x6=12**

1. ವಿನೋದನ ತಂದೆ ತಾಯಿಯವರು ಆತನ ಜನ್ಮ ದಿನದ ನಿಮಿತ್ತ ಎ.ಟಿ.ಎಮ್ ಕಾರ್ಡ್‌ನ್ನು ಉಡುಗೊರೆಯಾಗಿ ನೀಡುತ್ತಾರೆ. ಆತನಿಗೋಸ್ಕರ 50,000 ರೂಪಾಯಿಗಳನ್ನು ಬ್ಯಾಂಕ್ ಖಾತೆಯಲ್ಲಿ ಜಮಾಯಿಸುತ್ತಾರೆ. ಈ ಸಂದರ್ಭದಲ್ಲಿ ಅನೇಕ ಮಂದಿ ವಿನೋದನ ಗೆಳೆಯರಾಗುತ್ತಾರೆ. ಅವರೆಲ್ಲರೂ ಜತೆಗೂಡಿ ಮೋಜಿನ ಜೀವನ ನಡೆಸುತ್ತಾರೆ. ವಿನೋದನಲ್ಲಿದ್ದ ಹಣವೆಲ್ಲಾ ಆತನ ಗೆಳೆಯರ ಮೋಜಿಗಾಗಿಯೇ ವ್ಯಯವಾಯಿತು. ವಿನೋದನ ಬ್ಯಾಂಕ್ ಖಾತೆ ಹಾಗೂ ಜೇಬು ಖಾಲಿಯಾಯಿತು ಎಂದು ತಿಳಿಯುತ್ತಿದ್ದಂತೆ ಒಬ್ಬೊಬ್ಬ ಸ್ನೇಹಿತರು ಕಣ್ಮರೆಯಾದರು. ವಿನೋದ ಕೊನೆಗೆ ಒಂಟಿಯಾದ.

   **a) i) ವಿನೋದನ ತಂದೆ-ತಾಯಿಯವರು ಮಾಡಿದ ಕೆಲಸ ಸರಿಯೆ?**

   **ii) ಏಕೆ?**



   **b) i) ವಿನೋದನ ನಡತೆಯ ಬಗ್ಗೆ ನಿನ್ನ ಅನಿಸಿಕೆ ಏನು?**

   **ii) ಆತ ಏನು ಮಾಡಬಹುದಾಗಿತ್ತು?**

   **c) i) ನೀನು ವಿನೋದನ ಸ್ಥಳದಲ್ಲಿ ಇರುತ್ತಿದ್ದರೆ ಏನು ಮಾಡುತ್ತಿದ್ದಿ?**

   **ii) ಗೆಳೆತನವನ್ನು ಬೆಳೆಸಿಕೊಳ್ಳಲು ಅಗತ್ಯ ಗುಣಲಕ್ಷಣಗಳಾವುವು?**

2. ಸುರೇಖಾ ಹತ್ತನೆ ತರಗತಿಯ ವಿದ್ಯಾರ್ಥಿನಿ. ಈಕೆ ಕಲಿಕೆಯಲ್ಲಿ ಹಾಗೂ ಇತರ ಚಟುವಟಿಕೆಗಳಲ್ಲಿ ಯಾವಾಗಲೂ ಮುಂದು. ಈಕೆಯ ಮನೆಯಲ್ಲಿ ಇಂಟರ್‌ನೆಟ್ ಸೌಲಭ್ಯವಿದೆ ಹಾಗೂ ಈಕೆಯ ಬಳಿ ಮೊಬೈಲ್ ಕೂಡಾ ಇದೆ. ಈಕೆ ಪ್ರತೀ ದಿನ ಬಹಳಷ್ಟು ಸಮಯ "ಫೇಸ್‌ಬುಕ್" ನೋಡುವುದರಲ್ಲಿ ಹಾಗೂ ಮೊಬೈಲ್ ಮೆಸೆಜಿಂಗ್ (Mobile SMS) ನಲ್ಲಿ ಸಮಯವನ್ನು ಕಳೆಯುತ್ತಾಳೆ. ಆಕೆ ಓದುವುದನ್ನೇ ಕಡಿಮೆ ಮಾಡುತ್ತಾಳೆ. ಸುರೇಖಾ ಪರೀಕ್ಷೆಯಲ್ಲಿ ಅನುತ್ತೀರ್ಣಳಾದಳು. ತಾಯಿ ಗದರಿಸಿದಾಗ ಸುರೇಖಾ ಹೇಳಿದಳು, "ನಾನು ಫೇಸ್‌ಬುಕ್ ನೋಡಿದ ಕಾರಣ ಅನುತ್ತೀರ್ಣಳಾದುದಲ್ಲ, ಪರೀಕ್ಷೆಗೆ ಕೇಳಿದ ಪ್ರಶ್ನೆಗಳೇ ಸರಿ ಇರಲಿಲ್ಲ!"

   **a) i) ಸುರೇಖಾ ಕೊಟ್ಟ ಕಾರಣ ಸರಿಯೇ?**

   **ii) ಏಕೆ?**

   **b) i) ಸುರೇಖಾ ಮಾಡಿದ ತಪ್ಪು ಏನು?**

   **ii) ನೀನು ಸುರೇಖಾಳ ಸ್ಥಳದಲ್ಲಿ ಇರುತ್ತಿದ್ದರೆ ಏನು ಮಾಡುತ್ತಿದ್ದಿ?**

   **c) ಇಂಟರ್‌ನೆಟ್-ಫೇಸ್‌ಬುಕ್ ಹಾಗೂ ಮೊಬೈಲ್ ಬಳಕೆಯನ್ನು ನೀನು ಹೇಗೆ ಬಳಸುವೆ? ಎರಡು ಸಲಹೆ ಕೊಡು.**

3. ಸುನಿಲ್ ಹತ್ತನೇ ತರಗತಿಯಲ್ಲಿ ಓದುವ ವಿದ್ಯಾರ್ಥಿ. ಅವನು ತರಗತಿಯ ನಾಯಕ (ಕ್ಲಾಸ್ ಲೀಡರ್). ಬಹಳಷ್ಟು ಸಲ ಆತ ತರಗತಿಯ ಸಹಪಾಠಿಗಳೊಂದಿಗೆ ಚರ್ಚಿಸದೆ ತನ್ನದೇ ಆದ ನಿರ್ಧಾರವನ್ನು ಮಾಡುತ್ತಾನೆ. ತನಗೆ ಬೇಕಾದ ವಿದ್ಯಾರ್ಥಿಗಳನ್ನು ಮಾತ್ರ ಆರಿಸಿ ತರಗತಿಯ ಚಟುವಟಿಕೆಗಳನ್ನು ನೆರವೇರಿಸುತ್ತಾನೆ. ಎಲ್ಲಾ ವಿದ್ಯಾರ್ಥಿಗಳೊಡನೆ ಸಮಾನ ಮನೋಭಾವವನ್ನು ಬೆಳೆಸದೆ ಭೇದ-ಭಾವ ಮಾಡುತ್ತಾನೆ. ಈ ಕಾರಣದಿಂದ ಅವನಿಗೆ ವಿದ್ಯಾರ್ಥಿಗಳು ಸಹಕಾರ ನೀಡುತ್ತಿಲ್ಲ.

   **a) i) ಸುನಿಲ್ ಒಬ್ಬ ಉತ್ತಮ ಮುಖಂಡನೇ?**

   **ii) ಏಕೆ?**

   **b) i) ಸುನಿಲ್ ಮಾಡಿದ ತಪ್ಪುಗಳಾವುವು?**

   **ii) ಸುನಿಲನ ಮುಖಂಡತ್ವದಲ್ಲಿ ಇರಬೇಕಾದ ಎರಡು ಮುಖ್ಯ ಲಕ್ಷಣಗಳನ್ನು ಬರೆ.**

   **c) ಮುಖಂಡನ ಯಾವುದಾದರೂ 4 ಸ್ವಾಭಾವಿಕ ಚಿಹ್ನೆಗಳನ್ನು ಬರೆ.**